doc-534
T-P-2

Reg No 8 G 155 28—8—72

55th Year of Publication 'Satyavadi' daily, Mysore 4

In State - The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ-ಪ್ರಥಮ
ಸ್ವರ್ಣ
ಮಹೋತ್ಸವ
ಪರಮೇರಿಸಿದ
ಪತ್ರಿಕೆ

ಸ್ಥಾಪಕರು ಶ್ರೀಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕೋಮುವಾರು ಚಳುವಳಿ ಹೂಡುವುದಾಗಿ ಲಾಮಾರ ಬೆದರಿಕೆ

ಡಾ || ಮೋದಿ

ನೇತ್ರದಾನ ಪದ್ಮಭೂಷಣ ಡಾ || ಎಂ. ಸಿ ಮೋದಿಯವರು (ಭಾರತಾಧ್ಯಕ್ಷರ ಗೌ|| ನೇತ್ರ ವೈದ್ಯರು) ತಾ|| 29 ರಂದು ತುರುವೇಕೆರೆಯಲ್ಲಿ (ತುಮಕೂರು ಜಿಲ್ಲೆ) ನೇತ್ರ ಆಪರೇಷ ಶಿಬಿರ ನಡೆಸುವರು

★

ಕ್ಷಾಮ ಪರಿಸ್ಥಿತಿ ಎದುರಿಸುವಿಕೆ

ಹೊಸಪೇಟೆ — ರಾಜ್ಯದಲ್ಲಿಯ ಕ್ಷಾಮ ಪರಿಸ್ಥಿತಿಯನ್ನು, ಜನತೆಗೆ ಆಹಾರ ಮತ್ತು ಉದ್ಯೋಗ ಒದಗಿಸಿ, ಎದುರಿಸಲಾಗುವದೆಂದು ಅರ್ಥ ಮಂತ್ರಿ ಶ್ರೀ ಫೋರ್ಸ್‌ಡೆ ಹೇಳಿದರು.

★

ಚಳವಳಿಯಿಂದ ತಿಂಡಿ ಬೆಲೆ ತಗ್ಗಿತು

ಮಂಡ್ಯ — ವಿದ್ಯಾರ್ಥಿಗಳ 3 ದಿನಗಳ ಚಳವಳಿಯಿಂದ ಹೋಟಲುಗಳ ತಿಂಡಿ ಬೆಲೆ ತಗ್ಗಿತು

ಬೆತ್ತಲೆ ಒಲಂಪಿಕ್ ಕ್ರೀಡೆ

ವಿಂಡ್‌ಸೋರ್ (ಇಂಗ್ಲೆಂಡ್) — ಮ್ಯೂನಿಚ್‌ನಲ್ಲಿ ಒಲಂಪಿಕ್ಸ್ ಕ್ರೀಡೆಗಳು ಪ್ರಾರಂಭವಾಗುವ ಕಾಲದಲ್ಲೇ ಇಲ್ಲಿಯ ವಿಂಡ್ಸೋರ್ ಅರಮನೆ ಹತ್ತಿರದ ಪಾರ್ಕಿನಲ್ಲಿ ಆಪ್ರೊಡೈಟ್ ಚರ್ಚ್‌ನವರು, ಬೆತ್ತಲೆ ಸ್ಪರ್ಧಿಗಳ ಕ್ರೀಡೆಗಳನ್ನು ಏರ್ಪಡಿಸಲಿದ್ದಾರೆ !

ಜ್ಞಾನಕ್ಕೆ ಪರಿಮಿತಿ ಇಲ್ಲ

ಗುಲ್ಬರ್ಗ — ಬಾಳೆಪಳ್ಳಿಯಲ್ಲಿ ಒಂದು ಜೂನಿಯರ್ ಕಾಲೇಜನ್ನು ಉದ್ಘಾಟಿಸುತ್ತಾ, ವಿದ್ಯಾಮಂತ್ರಿ ಶ್ರೀ ಬಿ.ನಾರಾಯಣರು- ಈಗ ಭೂಮಿ ಆಸ್ತಿ, ಸಂಪತ್ತು ಮತ್ತು ಖರ್ಚಿಗೂ ಕೂಡ ಪರಿಮಿತಿ ಇದೆ; ಆದರೆ ಜ್ಞಾನಸಂಪಾದನೆಗೆ ಪರಿಮಿತಿ ಇಲ್ಲ, ಎಂದು ಹೇಳಿದರು.

ಬಂಗ್ಲಾದೇಶದ ನಿರಾಶ್ರಿತರ ಖರ್ಚು

ನವದೆಹಲಿ — ಮೇ 31 ರವರೆಗೆ ಬಂಗ್ಲಾದೇಶದ ನಿರಾಶ್ರಿತರ ಖರ್ಚು ರೂ 302 ಕೋಟಿ ಆಗಿರುವದೆಂದೂ, ವಿಶ್ವಸಂಸ್ಥೆ ಏಜೆನ್ಸಿಗಳು ಮತ್ತು ಸ್ವಯಂಸೇವಕ ಸಂಸ್ಥೆಗಳು ಮತ್ತು ವಿದೇಶೀ ಸರಕಾರಗಳು ರೂ. 198 37 ಕೋಟಿ ವಾಗ್ದಾನ ಮಾಡಿದ್ದರೂ ಭಾರತವು ರೂ. 138 95 ಪಡೆದಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ವರ್ತಕರ ಉಪವಾಸ ಸತ್ಯಾಗ್ರಹ

ಬಿಜಾಪುರ — ಇಲ್ಲಿಯ ಆಹಾರಧಾನ್ಯ ವರ್ತಕರು ತಮ್ಮ ಅಂಗಡಿಗಳ ಹತ್ತಿರ ಮಾಂಸ ಮತ್ತು ಮೀನು ಮಾರುಕಟ್ಟೆ ಮುಂದುವರಿಯುವುದನ್ನು ಪ್ರತಿಭಟಿಸಿ, ಗಾಂಧಿ ಚೌಕದಲ್ಲಿ ಸರದಿ ಮೇರೆ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿರುವರು.

●

ಕಾರ್ಪೊರೇಷನ್ ಆಗುವ ಸಂಭವ

ಮೈಸೂರು — ಇಲ್ಲಿಯ ಪೌರಸಭೆಯು ಕಾರ್ಪೊರೇಷನ್ ಆಗುವ ಸಂಭವವಿದೆ — ನಗರಪ್ರಾಯ ನಿಂಗ್ ಸಮಿತಿ ನಗರಕ್ಕೆ ಸುತ್ತಮುತ್ತಲ ಕೆಲವು ಪ್ರದೇಶವನ್ನು ಸೇರಿಸಲು ಶಿಫಾರಸು ಮಾಡಿದೆ.

★

ಚೀಣಾದ ವೀಟೋ

ಢಾಕಾ — ವಿಶ್ವಸಂಸ್ಥೆಯಲ್ಲಿ ಬಂಗ್ಲಾದೇಶಕ್ಕೆ ಸ್ಥಾನ ತಪ್ಪಿಸಲು ಚೀನಾ ವೀಟೊ ಮಾಡಿದ್ದನ್ನು, ಚೀನವು ಉಪಖಂಡದಲ್ಲಿ ಚದುರಂಗದ ಆಟ ಆಡುತ್ತಿದೆ ಎನ್ನಲಾಗಿದೆ

★

ರಾಷ್ಟ್ರಾಧ್ಯಕ್ಷರ ಸ್ಥಾನ

ನವದೆಹಲಿ — ರಾಷ್ಟ್ರಾಧ್ಯಕ್ಷರ ಸ್ಥಾನದ ಚುನಾವಣೆಗೆ ನಿಲ್ಲುವವರ ಬಗ್ಗೆ ಸಿಯುಯಗಳನ್ನು ಹೆಚ್ಚು ಬಿಗಿಯಾಗಿ ಮಾಡಲ್ಪಡುವುದು.

ಭೂಪರಿಮಿತಿಗೆ ಬೌದ್ಧ ಸನ್ಯಾಸಿಗಳ ವಿರೋಧ

ನವದೆಹಲಿ — ಭೂಮಿ ಪರಿಮಿತಿ ಶಾಸನದಿಂದ ಬೌದ್ಧ ಸನ್ಯಾಸಿಮಠಗಳಿಗೆ ಭೂಮಿ ಯಿಲ್ಲದಂತಾದರೆ, ಕೋಮುವಾರು ಚಳವಳಿ ಹೂಡುವುದೇಗಿ ಲಡಕ್ಕಿನ ಲಾಮಾಗಳು ಮುಖ್ಯ ಮಂತ್ರಿಗಳಿಗೆ ಮನವಿ ಅರ್ಪಿಸಿರುವರು.

○

ಮಿಂಚಿನಿಂದಾದ ಅನಾಹುತ

ಸೆಂಟ್ ನಸೈರ್ — ಒಂದು ಗ್ರೀಕ್ ಎಣ್ಣೆ ಟ್ಯಾಂಕರಿಗೆ ಮಿಂಚು ಹೊಡೆದು, ಅದು ಹತ್ತಿಕೊಂಡು ಎರಡು ಸ್ಫೋಟಗಳಾಗಿ, ಭಾರಿ ಜ್ವಾಲೆ ಎದ್ದಿತು — 18 ಮಂದಿ ನಾಪತ್ತೆಯಾಗಿದ್ದು, 26 ಮಂದಿ ಗಾಯಗೊಂಡರು.

○

ಯಾಕೆ ಹೀಗಾಯಿತು !

ನವದೆಹಲಿ — ವಿವಿಧ ರಾಜ್ಯಗಳಲ್ಲಿ ಭೂಮಿ ನೀರಿನ ಅಭಿವೃದ್ಧಿ, ನೀರಾವರಿ ಕಾರ್ಯ, ಕೃಷಿಯಂತ್ರೀಕರಣಗಳಿಗಾಗಿ ವಿಶ್ವ ಬ್ಯಾಂಕು ಮತ್ತು ಅಂತರ್‌ರಾಷ್ಟ್ರೀಯ ಅಭಿವೃದ್ಧಿ ಸಂಘಗಳು ಕೊಟ್ಟಿದ್ದ ಸಾಲ ಮತ್ತು ನೆರವಿನಲ್ಲಿ ರೂ 14 7 ಕೋಟಿ ಖರ್ಚು ಮಾಡಲಾಗಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಜಾಕ್‌ಪಾಟ್ ಹಣ ರೂ. 24 ಲಕ್ಷ

ಪೂನಾ — ಭಾನುವಾರದ ರೇಸೆಸ್‌ನಲ್ಲಿ ಜಾಕ್‌ಪಾಟ್ ಹಣ ರೂ. 2418320 24 ಟಿಕೇಟುಗಳಿಗೆ ಹಂಚಲಾಯಿತು.

★

ದಿವ್ಯವಾಣಿ

ದೇವರು ಇಲ್ಲದಿದ್ದರೆ ಅವನನ್ನು ಕಲ್ಪಿಸುವುದು ಅವಶ್ಯಕ. — ವಾಲ್ಟೇರ್

ಮಂತ್ರಿಮಂಡಲ

ಬೆಂಗಳೂರು — ಮಂತ್ರಿಮಂಡಲದ ಪುನರ್ರಚನೆಯಾಗಲೀ ವಿಸ್ತರಣೆಯಾಗಲೀ ಇಲ್ಲವೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ಪತ್ರಿಕೆಯವರಿಗೆ ಸ್ಪಷ್ಟವಾಗಿ ತಿಳಿಸಿದರು.

★

ಅಭಾವ ಜಿಲ್ಲಾ

ಮೈಸೂರು — ಮೈಸೂರು ಜಿಲ್ಲೆಯ (ಗ್ರಾಮಾಂತರ) ಹಳೆಯ ಕಾಂಗ್ರೆಸ್ ಸಮಿತಿಯು, ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಬೆಳೆ ನಷ್ಟವಾಗಿರುವದರಿಂದ ಅಭಾವ ಜಿಲ್ಲೆಯೆಂದು ಘೋಷಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಿದೆ.

●

ಮೈಸೂರು ರೇಸೆಸ್

ಮೈಸೂರು — ಭಾನುವಾರದ ರೇಸೆಸ್‌ನಲ್ಲಿ ಜಾಕ್‌ಪಾಟ್ ಹಣ ಪಡೆಯುವ ಟಿಕೇಟಿಲ್ಲದೆ, ಶೇಖರವಾಗಿದ್ದ ರೂ. 40020 ಮುಂದಕ್ಕೆ ಇಡಲಾಯಿತು.

●

ನೇಪಾಳಕ್ಕೆ ಧಾನ್ಯ

ನವದೆಹಲಿ — ರೈಲ್ವೇ ಶಾಖೆಯು ನೇಪಾಳಕ್ಕೆ 20 ಸಾವಿರ ಟನ್ ಆಹಾರಧಾನ್ಯವನ್ನು ಕಲ್ಕತ್ತಾ ನಗರದಿಂದ ಅದ್ಯತೆಯ ಮೇಲೆ ಸಾಗಿಸಲು ವ್ಯವಸ್ಥೆ ಮಾಡಿದೆ.

★

ಉಳಿತಾಯ

ರಾಷ್ಟ್ರೀಯ ಉಳಿತಾಯ ಯೋಜನೆಗಳಲ್ಲಿ ಈ ವರ್ಷ ಏಪ್ರಿಲ್ ಒಂದರ ಹೊತ್ತಿಗೆ ರೂ 2446 ಕೋಟಿ ಸಂಗ್ರಹವಾಗಿದ್ದು, ದೊಡ್ಡ ದಾಖಲೆಯನ್ನು ನಿರ್ಮಿಸಿದೆ; ಈ ಅವಧಿಯಲ್ಲಿ ದೇಶದ ಎಲ್ಲಾ ವಾಣಿಜ್ಯ ಬ್ಯಾಂಕುಗಳಲ್ಲಿದ್ದ ಒಟ್ಟು ಠೇವಣಿಗಳಿಗಿಂತಲೂ ಇದು 632 ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿದೆ.

ಮೇಲ್ಕಟ್ಟದಲ್ಲಿ ಆಡಳಿತ ಭಾಷೆಯಾಗಿ ಕನ್ನಡ ಬಳಕೆ

ಬೆಂಗಳೂರು— ಮುಂದೆ ಕನ್ನಡವನ್ನು ಮೇಲ್ಕಟ್ಟದಲ್ಲಿ ಆಡಳಿತ ಭಾಷೆಯನ್ನಾಗಿ ಉಪಯೋಗಿಸುವುದರ ಪ್ರಥಮ ಹಂತವಾಗಿ ಈಗಿನಿಂದಲೇ ಜಿಲ್ಲಾ ಮೇಲ್ಕಟ್ಟದಲ್ಲಿ ಎಲ್ಲ ಕಚೇರಿಗಳಲ್ಲಿ ಫೈಲುಗಳ ಮೇಲೆ ಟೀಕೆ ಟಿಪ್ಪಣಿಗಳನ್ನು ಬರೆಯುವಾಗ ಸಾಧ್ಯವಾದಷ್ಟು ಮಟ್ಟಿಗೂ ಕನ್ನಡವನ್ನೇ ಬಳಸಬೇಕೆಂದು ರಾಜ್ಯ ಸರಕಾರ ತನ್ನ ಕಚೇರಿಗಳಿಗೆ ಆದೇಶ ನೀಡಿದೆ.

ನಿರುದ್ಯೋಗಿ ಆಯುರ್ವೇದ ಪದವೀಧರರಿಗೆ

ಬೆಂಗಳೂರು— ಆಯುರ್ವೇದ ಪದವೀಧರರನ್ನು 31–3–73 ರ ವರೆಗೆ ತಿಂಗಳಿಗೆ ರೂ. 250 ವೇತನದ ಮೇಲೆ ಆಯ್ಕೆಯಾದ 20 ತಾಲ್ಲೂಕು ಮುಖ್ಯ ಕೇಂದ್ರಗಳಲ್ಲಿ ಆಯುರ್ವೇದ ಅಸಿಸ್ಟೆಂಟರನ್ನಾಗಿ ನೇಮಿಸಲಾಗುವುದು.

ಕನ್ನಡಕದ ಫ್ರೇಂ ರಫ್ತು

ನವದೆಹಲಿ— ಕನ್ನಡಕದ ಫ್ರೇಮ್ ರಫ್ತು ಉದ್ಯಮದಲ್ಲಿ ಭಾರತ ಪ್ರಮುಖ ಸ್ಥಾನ ಹೊಂದಿದೆ ; 70–71 ರಲ್ಲಿ ರೂ. 37 ಲಕ್ಷ ಬೆಲೆಯ ಕನ್ನಡಕದ ಫ್ರೇಂಗಳನ್ನು ರಫ್ತು ಮಾಡಿತು

ದಿವ್ಯವಾಣಿ

ಸಂಪೂರ್ಣ ವಿಶ್ವವು ಶಿಕ್ಷೆಯ ಹತೋಟಿಯಲ್ಲಿದೆ ; ಯಾಕೆಂದರೆ ತಪ್ಪಿತಸ್ಥನಲ್ಲದ ಮನುಷ್ಯನನ್ನು ಕಾಣುವುದು ದುರ್ಲಭ — ಮನು

ವುಡ್‌ಲ್ಯಾಂಡ್ 25 8 72 ರಿಂದ ಆಮೋಘ ಪ್ರಾರಂಭ

ರಾಜೇಂದ್ರ ಕುಮಾರ್ ಅರ್ಪಿಸುವ

ಟಾಂಗೇವಾಲಾ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ — ರಾಜೇಂದ್ರ ಕುಮಾರ್ ಮುಮ್ತಾಜ್ ಐ. ಎಸ್. ಜೋಹರ್

ಸಂಗೀತ – ನೌಷದ್ ನಿರ್ದೇಶನ – ನರೇಶ್ ಕುಮಾರ್

ಬೆಳಗಿನ ಪ್ರದರ್ಶನ 10–30 ಕ್ಕೆ ಗುರುದಕ್ಷಿಣೆ

ಅಪೆರಾ 3 ನೇ ವಾರ

— ಆತ್ಯಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಲಾಲ್ ಪತ್ತರ್

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ — ರಾಜ್‌ಕುಮಾರ್, ಹೇಮಾಮಾಲಿನಿ, ರಾಖಿ, ವಿನೋದ್ ಮೆಹ್ರಾ

Contribute Liberally

to the National Defence Fund

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore

ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಆವನು ಮೃಗಸಾಮ್ರಾಜ್ಯಕ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೀಶ ಹೊತ್ತ ಚಿತ್ರ ಸಂದೇಶ ರವರ ಜೊಚ್ಚಲು ಚಿತ್ರ

★

ಆನೆ – ಹುಡುಗ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ



Potect the Cow

Help The Gorakshana

— Humanitarian Propoganda Monthly ....

SHAKTI SUDHA

A Superb Tonic